ತಪ್ಪು ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ನಾನು preliminary submission ಮಾಡುತ್ತೇನೆ. ನಂತರ ಮಾನ್ಯ ಅಧ್ಯಕ್ಷರು ಸದನವನ್ನು adjourn ಮಾಡಬಹುದು.

**ಅಧ್ಯಕ್ಷರು:** ಈಗ ಸದನವನ್ನು ಮಧ್ಯಾಹ್ನ 3.15 ಗಂಟೆಗೆ ಸೇರುವಂತೆ ಮುಂದೂಡುತ್ತಿದ್ದೇನೆ.

**(ಸಭೆಯು ಮಧ್ಯಾಹ್ನ 2 ಗಂಟೆ 8 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

(ಸದನ ಮಧ್ಯಾಹ್ನ 3.45ಕ್ಕೆ ಪುನಃ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು (ಶ್ರೀಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

**7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ**

**ವಿಷಯ: ಸದನದಲ್ಲಿ ಸದಸ್ಯರ ಸಚಿವರುಗಳ ಗೈರು ಹಾಜರಿ ಬಗ್ಗೆ.**

**ಅಧ್ಯಕ್ಷರು :** ಮಾನ್ಯ ಶ್ರೀರಾಮರೆಡ್ಡಿಯವರೆ ಪ್ರಾರಂಭ ಮಾಡಿ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ಇಲ್ಲಿ ಯಾರೂ ಇಲ್ಲ.

**ಅಧ್ಯಕ್ಷರು :** ಈಗ ನೋಡಿ ಇದ್ದಾರೋ ಇಲ್ಲವೋ, ಆಸಕ್ತಿ ಇದ್ದವರು ಇದ್ದಾರೆ ಈಗ ನಾನು ಹೇಳುವುದು ರೆಡ್ಡಿಯವರೆ, ಆಸಕ್ತಿ ಇದ್ದವರು ಇದ್ದಾರೆ ಆಸಕ್ತಿ ಇಲ್ಲದವರು ಬಂದಿಲ್ಲ. ಅದಕ್ಕೋಸ್ಕರ ಅದೇನೂ ಮಾಡುವುದ ಕ್ಕಾಗುವುದಿಲ್ಲ. ಮಾತನಾಡಿ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :** ಮಾನ್ಯ ಅಧ್ಯಕ್ಷರೆ, ಆಸಕ್ತಿ ಇದ್ದವರು ಇದ್ದಾರೆ ಎಂದರೆ, ಸರ್ಕಾರಕ್ಕೆ ಆಸಕ್ತಿ ಇಲ್ಲವೆಂದ ಹಾಗಾಯಿತು. ಅವರು ಯಾರೂ ಇಲ್ಲ.

**ಅಧ್ಯಕ್ಷರು :** ನಾನು ಏನೂ ಹೇಳುವುದಕ್ಕಾಗುವುದಿಲ್ಲ. I don't want to comment. ಈಗ ನಾನು ಕಾಮೆಂಟ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆಸಕ್ತಿ ಇದ್ದವರು ಇದ್ದಾರೆ. ಆಸಕ್ತಿ ಇಲ್ಲದವರು ಬಂದಿಲ್ಲ. ಕೋರಂ ಇದೆ, ಮಾತನಾಡಿ ದಯಮಾಡಿ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ಕರೆಕ್ಟ್ ಮಾತನಾಡುತ್ತೇನೆ, ಆದರೆ ಜವಾಬ್ದಾರಿ ಇರತಕ್ಕಂಥವರು ಒಬ್ಬರೂ...

**ಅಧ್ಯಕ್ಷರು** : ಅದು ನೀವು ಕಾಮೆಂಟ್ ಮಾಡಿ. ನೀವೇ ಕಾಮೆಂಟ್ ಮಾಡಿ ಏನು ಹೇಳಬೇಕೋ, ಮಂಗಳಾರತಿ ಏನು ಎತ್ತಬೇಕೋ ಎತ್ತಿ ಇವರಿಗೆ. ನನ್ನ ಬಾಯಿಂದ ಏಕೆ ಬರಬೇಕು. ಮಾತನಾಡಿ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಆಯಿತು, ನಾವು ನಿಮಗೆ ಇರಿಸು ಮುರಿಸು ಮಾಡುವುದಕ್ಕೆ ಇಷ್ಟಪಡುವುದಿಲ್ಲ.

**ಶ್ರೀ ವಾಟಾಳ್ ನಾಗರಾಜ್** : ಹೊಸ ಮಂತ್ರಿಮಂಡಲ ರಚನೆಯಾದ ಮೇಲೂ ಮಂತ್ರಿಗಳಿಲ್ಲವೆಂದರೆ ಹೇಗೆ?

**ಅಧ್ಯಕ್ಷರು** : ವಾಟಾಳ್ ನಾಗರಾಜ್‌ರವರೇ ಈಗ ಬೆಳೆಸುವುದು ಬೇಡ.

**ಶ್ರೀ ವಾಟಾಳ್ ನಾಗರಾಜ್** : ಮಾನ್ಯ ಅಧ್ಯಕ್ಷರೆ, ಈ ಸದನವನ್ನು ನಡೆಸುವುದು...

**ಅಧ್ಯಕ್ಷರು** : ಅದನ್ನು ಮುಂದುವರೆಸುವುದು ಬೇಡ, ಏಕೆಂದರೆ ಒಟ್ಟಿನಲ್ಲಿ ಹೇಳುತ್ತೇನೆ ನನಗೂ ಬೇಜಾರಾಗಿದೆ. ಟೈಂ ವೇಸ್ಟ್ ಮಾಡುವುದು ಬೇಡ, ಮಾತನಾಡಿ.

**8. ನಿಲುವಳಿ ಸೂಚನೆಗೆ ಅನುಮತಿ ಕೋರಿಕೆಯ ಬಗ್ಗೆ ಮುಂದುವರೆದ ಚರ್ಚೆ**

**ವಿಷಯ: ಬಿ.ಎಂ.ಐ.ಸಿ.ಯೋಜನೆ ಬಗ್ಗೆ.**

**ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ)** : ಮಾನ್ಯ ಅಧ್ಯಕ್ಷರೆ, ನಾನು ಬಹಳ ಮುಖ್ಯವಾಗಿ ಹೇಳಬೇಕಾಗಿರುವಂತಹ ಪ್ರಿಲಿಮಿನರಿ ಸಬ್‌ಮಿಷನ್, ಡಿಟೈಲ್‌ಗೆ ನಾನು ಹೋಗುವುದಿಲ್ಲ. ಒಂದು ರಾಜಕೀಯ ಬಿಕ್ಕಟ್ಟು ಉಂಟಾಗಿರುವುದು ಏಕೆಂದರೆ ಆ ಬಿಎಂಐಸಿ ಯೋಜನೆ ಬಗ್ಗೆ ಸರ್ಕಾರದ ಮಧ್ಯೆ ಸಾಮರಸ್ಯ ಇಲ್ಲದೆ ಭಿನ್ನಾಭಿಪ್ರಾಯ ಬಂದು ಕ್ಯಾಬಿನೆಟ್ ಮೀಟಿಂಗ್ ನಡೆಯಲಾರದಂತಹ ಸ್ಥಿತಿಗೆ ನಿರ್ಮಾಣ ಮಾಡಿ ತಂದಿರುವಂತಾದ್ದು ರಾಜಕೀಯ ಬಿಕ್ಕಟ್ಟು ಎಂದು ಹೇಳುವುದು ನನ್ನ ಒಂದನೇ ಪಾಯಿಂಟ್. ಎರಡನೇ ಪಾಯಿಂಟ್ ಆ ರಾಜಕೀಯ ಬಿಕ್ಕಟ್ಟಿನ ಪರಿಣಾಮ ಮೂರು ದಿವಸ ಈ ಸದನದ ಸಮಯವನ್ನು ಹಾಳು ಮಾಡಿದೆ ಎಂದು ನಾವು ತಿಳಿಯಬೇಕಾಗಿದೆ. ಇನ್ನು ಮೂರನೆಯ ಮುಖ್ಯವಾದ ಪಾಯಿಂಟ್ ಇರತಕ್ಕಂಥಾದ್ದು, ಸರ್ಕಾರ ನಡೆಸತಕ್ಕಂಥ ಎರಡು ಪಕ್ಷಗಳು ಏನಿವೆ ಅವರದ್ದು ಒಂದೊಂದು ದಿಕ್ಕಾಗಿದೆ. ಒಬ್ಬರದ್ದು ಒಂದು ದಿಕ್ಕು, ಇನ್ನೊಬ್ಬರದ್ದು ಇನ್ನೊಂದು ದಿಕ್ಕಾಗಿದೆ. ಹಾಗಾಗಿ ಈ ರಾಜ್ಯದಲ್ಲಿ ಸರ್ಕಾರ ಇದೆಯೋ ಇಲ್ಲವೋ, ಸರ್ಕಾರ ಇದ್ದರೆ ಈ ಪರಿಸ್ಥಿತಿ ಏಕೆ ನಿರ್ಮಾಣವಾಯಿತು ಎನ್ನುವಂಥಾದ್ದು ಬಹಳ ಮುಖ್ಯವಾದ ಪ್ರಶ್ನೆ. ಏಕೆಂದರೆ ಇದು ರಾಜ್ಯವನ್ನು ಕಾಡುತ್ತಿರತಕ್ಕಂಥ ಸಮಸ್ಯೆ.